**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 78/2019**

ಪ್ರಾ.ಸಾ. 11

ಚಾ.ಸಾ. 25

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 10.12.2024**

| | |
|---|---|
| ಸಾಕ್ಷಿದಾರರ ಹೆಸರು | ರಮೇಶ್ |
| ತಂದೆಯ ಹೆಸರು | ಲೇಟ್ ಪುಟ್ಟಮಾದಯ್ಯ |
| ವಯಸ್ಸು | 52 ವರ್ಷ |
| ಉದ್ಯೋಗ | ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಮಳವಳ್ಳಿ ಟೌನ್ ಪೊಲೀಸ್ ಠಾಣೆ |
| ವಾಸ | ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2014 ರಿಂದ 2020 ರವರೆಗೆ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 18.11.2016 ರಂದು ನಾನು ಠಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ.1 ರವರು ಚಿಕಿತ್ಸೆ ಪಡೆಯುತ್ತಿದ್ದು ಅಲ್ಲಿಗೆ

ಭೇಟಿ ನೀಡಿ ಅವರ ಹೇಳಿಕೆ ಪಡೆಯುವ ಸಲುವಾಗಿ ಚಾಸಾ.26 ರವರು ಅವರೊಂದಿಗೆ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಸದರಿ ಕರ್ತವ್ಯಕ್ಕೆ ಕರೆದುಕೊಂಡು ಹೋಗಿ ಸದರಿ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚಾಸಾ.23 ರವರ ಸಮಕ್ಷಮ ಚಾಸಾ.26 ರವರು ಮದ್ಯಾಹ್ನ 4.30 ರಿಂದ 5.30 ರವರೆಗೆ ಚಾಸಾ.1 ರವರ ಹೇಳಿಕೆ ಪಿರ್ಯಾದನ್ನು ಪಡೆದುಕೊಂಡಿದ್ದು ಸದರಿಯವರು ಹೇಳಿದ ಹಾಗೇ ನನ್ನ ಕೈಬರಹದಲ್ಲಿ ನಿಪಿ.1 ಅನ್ನು ಬರೆದಿರುತ್ತೇನೆ. ನಿಪಿ.1 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.1ಬಿ ಎಂದು ಗುರುತಿಸಲಾಗಿದೆ. ವೈದ್ಯರು ಗಾಯಾಳು ಹೇಳಿಕೆ ಕೊಡುವ ಸ್ಥಿತಿಯಲ್ಲಿದ್ದಾರೆಂದು ಹೇಳಿದ ಮೇರೆಗೆ ಚಾಸಾ.1 ರವರ ಹೇಳಿಕೆ ಪಡೆದುಕೊಳ್ಳಲಾಯಿತು.

.

.3. ನಂತರ ವೈದ್ಯರು ಸಂಗ್ರಹಿಸಿಕೊಟ್ಟಂತಹ ಗಾಯಾಳುವಿನ ಮೈಲಿದ್ದಂತಹ ಚೂಡಿದಾರ್ ಟಾಪ್, ಪ್ಯಾಂಟು, ವೇಲ್, ಬ್ರಾ ಇವುಗಳನ್ನು ನನಗೆ ಕೊಟ್ಟಿದ್ದು ಅವುಗಳನ್ನು ಠಾಣೆಗೆ ಮರಳಿ ಠಾಣಾ ಪಿಎಫ್ ನಂ.168/2016 ರಲ್ಲಿ ನೋಂದಾಯಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.